# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 42/2018

(ಪ್ರಾಸಾ-3 ಚಾಸಾ-3 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 23.01.2023.

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜು |
| ತಂದೆ ಹೆಸರು | - | ಮುನಿಯಪ್ಪ |
| ವಯಸ್ಸು | - | 21 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಕೆ. ಮಲ್ಲಸಂದ್ರ, ಹೊಸಕೋಟೆ ತಾಃ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>

ಪ್ರಾಸಾ-1 ಮತ್ತು 2 ಮತ್ತು ಮೃತ ಪೃಥ್ವಿರಾಜ್ ಇವರ ಪರಿಚಯ ಇದೆ. ನಾವು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ಜತ್ತಿ ದ್ವಾರಕಮಯಿ ಅಪಾರ್ಟ್ ಮೆಂಟ್ ನ ಮಾಲೀಕರು. 1 ನೇ ಆರೋಪಿ ಬ್ರಾಹ್ಮಣ ಜಾತಿಯವರು. 2 ಮತ್ತು 3 ನೇ ಆರೋಪಿತರು ಅದೇ ಅಪಾರ್ಟ್ ಮೆಂಟ್ ನಲ್ಲಿ ಕೆಲಸ ಮಾಡುತ್ತಾರೆ. ಅವರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜಾತಿಯವರು.

2. ದಿಃ24.05.2017 ರಂದು ಬೆಳಗ್ಗೆ ಸುಮಾರು 8 ಘಂಟೆ ಸಮಯದಲ್ಲಿ 1 ನೇ ಆರೋಪಿಯ ಗಾರ್ಡನ್ ಕೆಲಸ ಇದೆ ಎಂದು 2 ಮತ್ತು 3 ನೇ ಆರೋಪಿತರು ನನ್ನನ್ನು, ಮೃತ ಪೃಥ್ವಿರಾಜ್ ಮತ್ತು ಪ್ರಾಸಾ-2 ದಿನೇಶ್ ನನ್ನು ಕರೆಸಿದರು. ಮಧ್ಯಾಹ್ನ ಸುಮಾರು 02.00 ಘಂಟೆಯವರೆಗೆ ಗಾರ್ಡನ್ ಕೆಲಸ ಮಾಡಿದೆವು.

3. ನಂತರ Sewage treatment plant (STP) ಕ್ಲೀನ್ ಮಾಡುವಂತೆ ಆರೋಪಿ ಮುರಳಿ ಮತ್ತು ಪ್ರದೀಪ್ ಹೇಳಿದರು. ನಮಗೆ ಅದನ್ನು ಕ್ಲೀನ್ ಮಾಡಲು ಬರುವುದಿಲ್ಲ ಎಂದು ನಾವು ಮೂರು ಜನ ಹೇಳಿದೆವು. ಅದಕ್ಕೆ ನಾವು ಇದ್ದೇವೆ,ಏನೂ ಆಗುವುದಿಲ್ಲ

ಮಾಡಿ ಎಂದು ಅವರಿಬ್ಬರು ಹೇಳಿದರು. ಆ ಎಸ್ ಟಿ ಪಿ ಅಂದಾಜು 20 ಅಡಿ ಆಳ ಇದೆ. ಏಣಿ ಹಾಕಿಕೊಂಡು ಮೊದಲು ನಾನು ಒಳಗೆ ಇಳಿದೆ. ವಾಸನೆ ಬಂದು ನಾನು ಎಸ್‌ಟಿಪಿ ಒಳಗೆ ಬಿದ್ದೆ. ನನ್ನ ಹಿಂದೆ ಪೃಥ್ವಿರಾಜ್ ಬಂದ. ನಾನು ಬಿದ್ದ ನಂತರ ನನಗೆ ಜ್ಞಾನ ಹೋಯಿತು. ಆಸ್ಪತ್ರೆಯಲ್ಲಿ 4-5 ದಿನ ಆದ ಮೇಲೆ ನನಗೆ ಪ್ರಜ್ಞೆ ಬಂತು. ಪೃಥ್ವಿರಾಜ್ ತೀರಿಕೊಂಡಿದ್ದಾಗಿ ಆಗ ತಿಳಿಯಿತು. 2 ಮತ್ತು 3 ನೇ ಆರೋಪಿತರು ಪೃಥ್ವಿರಾಜ್ ನಿಗೂ ಸಹ ಪಿಟ್ ಕ್ಲೀನ್ ಕೆಲಸಕ್ಕೆ ಹಚ್ಚಿದ್ದರು. ಪ್ರಾಸಾ-2 ಈತ ನನ್ನ ತಂದೆ ತಾಯಿಗಳಿಗೆ ಮತ್ತು ಫ್ರೆಂಡ್ಸ್ ಗೆ ವಿಷಯ ತಿಳಿಸಿದ್ದಾಗಿ ಗೊತ್ತಾಯಿತು. ಪೋಲಿಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದಿದ್ದಾರೆ. ಪಿಟ್ ಕ್ಲೀನ್ ಮಾಡಲು ಬಕೇಟ್, ಏಣಿ ಮತ್ತು ಹಗ್ಗ ಕೊಟ್ಟಿದ್ದರು. ಈಗ ತೋರಿಸಿದ ಮು.ಮಾ-1 ಬಕೇಟ್ ಅನ್ನೇ ಅವರು ನೀಡಿದ್ದರು. ಈಗ ತೋರಿಸಿದ ಮು.ಮಾ-2 ಚಪ್ಪಲಿ ಮೃತನದ್ದು ಇದೆ. ಈಗ ತೋರಿಸಿದ ಹಗ್ಗವನ್ನೇ ನೀಡಿದ್ದರು. ಹಗ್ಗವನ್ನು ಮು.ಮಾ-3 ಎಂದು ಗುರ್ತಿಸಲಾಯಿತು. ಪಿಟ್ ನಲ್ಲಿ ಇಳಿಸಿದಾಗ ಸಮಯ ಅಂದಾಜು ಸಂಜೆ 4 ಘಂಟೆಯಾಗಿತ್ತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಐ ಜಿ ವಕೀಲರಿಂದಃ</u>**

4. ದಿಃ24.05.2017 ರಂದಾಗಲೀ ಅಥವಾ ಅದಕ್ಕೂ ಮೊದಲಾಗಲೀ 1 ನೇ ಆರೋಪಿ ಯಾವತ್ತೂ ನನ್ನನ್ನು ಯಾವುದೇ ಕೆಲಸಕ್ಕೆ ಕರೆದಿಲ್ಲ ಎಂದರೆ ಸರಿ. ನನ್ನ ಜಾತಿ, ಕೆಲಸ, ವಾಸಿಸುವ ಸ್ಥಳ ಇವುಗಳ ಮಾಹಿತಿ 1 ನೇ ಆರೋಪಿಗೆ ಇಲ್ಲ ಎಂದರೆ ಸರಿ. ದಿಃ24.05.2017 ರಂದು ದ್ವಾರಕಮಯಿ ವಿಲ್ಲಾದಲ್ಲಿ 1 ನೇ ಆರೋಪಿಯನ್ನು ನಾನು ನೋಡಿಯೇ ಇಲ್ಲ ಎಂದರೆ ಸರಿ. ನಾವು ಕೆಲಸ ಮಾಡುವ ಸ್ಥಳಕ್ಕೆ 1 ನೇ ಆರೋಪಿ ಬಂದಿರಲಿಲ್ಲ ಎಂದರೆ ಸರಿ. ಸದರಿ ಲೇಔಟ್ ನಲ್ಲಿ ಕೆಲಸಕ್ಕೆ ಹೋಗಿದ್ದಕ್ಕೆ ಸೆಕ್ಯೂರಿಟಿ ಹತ್ತಿರದ ರಿಜಿಸ್ಟರ್ ನಲ್ಲಿ ನಾನು ಸಹ ಸಹಿ ಮಾಡಿದ್ದೇನೆ. ಆ ಲೇಔಟ್ ನಲ್ಲಿ ಎಷ್ಟು ವಿಲ್ಲಾಗಳಿವೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯವಾದ್ದರಿಂದ 2 ಮತ್ತು 3 ನೇ ಆರೋಪಿತರ ಪರ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ**

5. 2 ಮತ್ತು 3 ನೇ ಆರೋಪಿತರು ನಮ್ಮ ಊರಿಗೆ ಬಂದು ನನಗೂ ಮತ್ತು ಪೃಥ್ವಿರಾಜ್ ನಿಗೂ ಕೆಲಸಕ್ಕೆ ಬರುವಂತೆ ಕರೆದರು. ವಿಲ್ಲಾದ ಹತ್ತಿರ ಕೆಲಸಕ್ಕೆ ಹೋದಾಗ ಸಮಯ ಬೆಳಗ್ಗೆ 8 ರಿಂದ 9 ಆಗಿರಬಹುದು. 2 ಮತ್ತು 3 ನೇ ಆರೋಪಿತರು ಕರೆದುಕೊಂಡು ಹೋದ ಗಾರ್ಡನ್ ಕೆಲಸ ಮಧ್ಯಾಹ್ನ 2 ಘಂಟೆಗೆ ಮುಗಿದಿತ್ತು. 2 ಘಂಟೆಯ ನಂತರ 2 ಮತ್ತು 3 ನೇ ಆರೋಪಿತರು ನಮಗೆ ಯಾವುದೇ ಕೆಲಸ ಹೇಳಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಗಾರ್ಡನ್ ಕೆಲಸ ಆದ ಮೇಲೆ ಮಧ್ಯಾಹ್ನ 2 ಘಂಟೆಗೆ ನಮಗೆ ಊಟ ಮಾಡಿಕೊಂಡು ನಮ್ಮ ಮನೆಗಳಿಗೆ ಹೋಗುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಅವರು ಯಾವುದೇ ಟ್ಯಾಂಕ್ ಕ್ಲೀನ್ ಮಾಡುವ ಕೆಲಸ ಹೇಳಿರಲಿಲ್ಲ ಎಂದರೆ ಸರಿಯಲ್ಲ.

6. ಪಿಟ್ ನ ಕ್ಯಾಪ್ ಓಪನ್ ಮಾಡಿ ನೋಡಿದ ಮೇಲೆ ಅದರ ವಾಸನೆಗೆ ನೀವು ತಲೆ ಸುತ್ತು ಬಂದು ಬಿದ್ದಿದ್ದೀರಿ ಎಂದರೆ ಸಾಕ್ಷಿದಾರರು ಏಣಿಯಿಂದ ಕೆಳಗೆ ಇಳಿದಾಗ ತಲೆ ಸುತ್ತು ಬಿದ್ದಿದ್ದೇನೆ ಎನ್ನುತ್ತಾರೆ. ನೀವು ತಲೆ ಸುತ್ತಿ ಬಿದ್ದಿದ್ದರಿಂದ ನಿಮ್ಮನ್ನು ಕಾಪಾಡಲು ಪೃಥ್ವಿರಾಜ್ ರವರು ಅದರ ಒಳಗೆ ಇಳಿದರಾ ಎಂದರೆ ಸಾಕ್ಷಿದಾರರು ಹೌದು ಎನ್ನುತ್ತಾರೆ. ನಮ್ಮ ಹುಡುಗಾಟದಿಂದ ಈ ಅವಘಡ ಆಗಿದೆ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗುವಂತೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

(ನಂತರದಲ್ಲಿ ಮಾನ್ಯ ಎಸ್ ಪಿ ಪಿ ರವರು ಅಭಿಯೋಜನೆ ಪ್ರಕಾರ ಈ ಸಾಕ್ಷಿಯು ಘಟನೆ ಸಮಯದಲ್ಲಿ ಬಾಲಕನಾಗಿದ್ದು ಆತನ ವಯಸ್ಸಿ ನ ಬಗ್ಗೆ ಪ್ರಶ್ನೆ ಕೇಳದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಎಸ್‌ಪಿಪಿರವರಿಂದಃ**

7. ನಾನು ಹುಟ್ಟಿದ ತಾರೀಖು 11.04.2000.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

8. 2017 ರಲ್ಲಿ ನಾನು ಟೆಂಪೋ ಓಡಿಸುತ್ತಿದ್ದೆ. ನನಗೆ ಡಿಎಲ್ ಇರಲಿಲ್ಲ. ಘಟನೆ ಕಾಲಕ್ಕೆ ನನಗೆ 18 ವರ್ಷ ದಾಟಿತ್ತು ಎಂದರೆ ಸರಿಯಲ್ಲ.

(2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ).

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು